( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ಅಸಲು ದಾವೆ ನಂ.202/2016**

**ದಿನಾಂಕಃ 09-06-2023, ಪಿ ಡಬ್ಲ್ಯೂ–1**

ಮುಂದುವರೆದ ಪಾಟೀ ಸವಾಲು ಃ ಶ್ರೀ ಎಂ ಎನ್ ಆರ್ ವಕೀಲರಿಂದಃ

ನಾವು ಬೇರೆ ಬೇರೆ ಇದ್ದೇವೆ ಎಂದು ದಾವೆಯಲ್ಲಿ ಹೇಳಿರುತ್ತೇವೆ. ವಾದ ಪತ್ರದಲ್ಲಿ ನಾವು ಬೇರೆ ಬೇರೆ ಇದ್ದೇವೆ ಎಂದು ಬರೆಸಿರುತ್ತೇನೆ ಎಂದರೆ ಸರಿ. 2 ನೇ ಹೆಂಡತಿ ಸಾಕಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ನನ್ನ ತಂದೆ 2013 ರಲ್ಲಿ ಮೃತಪಟ್ಟಿರುತ್ತಾರೆ. ನನಗೆ ದಿನಾಂಕ ನೆನಪಿರುವುದಿಲ್ಲ.

ಸರ್ವೆ ನಂ. 95/1 ರ ಪಹಣಿ ಪತ್ರಿಕೆಯಲ್ಲಿರುವ ಹನುಮಂತಯ್ಯ ಬಿನ್ ಹನುಮ ಶೆಟ್ಟಿ ನನ್ನ ಚಿಕ್ಕಪ್ಪ. ಸರ್ವೆ ನಂ. 95/1 ನ್ನು ಹೊರತು ಪಡಿಸಿ ನಮ್ಮ ಕುಟುಂಬದಲ್ಲಿ ಬೇರೆ ಆಸ್ತಿಗಳು ಇಲ್ಲ. ಸರ್ವೆ ನಂ. 91 ಮತ್ತು 91 ಬಿ ನನ್ನ ತಾಯಿ ಲಕ್ಷ್ಮಮ್ಮ ಕೋಂ ಹನುಮಶೆಟ್ಟಿ ರವರು ಹೆಸರಿನಲ್ಲಿದ್ದು, ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ ಮುಂದುವರೆದು ಸಾಕ್ಷಿಯು ಲಕ್ಷ್ಮಮ್ಮ ನನ್ನ ಅತ್ತೆ ಎಂದು ನುಡಿಯುತ್ತಾರೆ. ಸದರಿ ಲಕ್ಷ್ಮಮ್ಮ ನನ್ನ ತಂದೆಯ ಅಕ್ಕ. ಸದರಿ ಲಕ್ಷ್ಮಮ್ಮ ನವರನ್ನು ಹೊಳೆನರಸೀಪುರಕ್ಕೆ ಕೊಟ್ಟು ವಿವಾಹ ಮಾಡಿರುತ್ತೇವೆ. ಈಗ ಅವರು 2 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ಲಕ್ಷ್ಮಮ್ಮ ನವರ ಗಂಡನ ಹೆಸರು ನರಸಿಂಹಯ್ಯ.

ಸರ್ವೆ ನಂ. 91 ಮತ್ತು 91 ಬಿ ಪಹಣಿ ಪತ್ರಿಕೆಯಲ್ಲಿ ಲಕ್ಷ್ಮಮ್ಮ ಕೋಂ ಹನುಮಶೆಟ್ಟಿ ಎಂದರೆ ಸರಿ. ಸದರಿ ಜಮೀನುಗಳು ನಮ್ಮ ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿ. ನನ್ನ ಅತ್ತೆ ಲಕ್ಷ್ಮಮ್ಮ ರವರನ್ನು ಅಥವಾ ಅವರ ಮಕ್ಕಳನ್ನು ಈ ದಾವೆಗೆ ಸೇರಿಸಿಲ್ಲ. ಸರ್ವೆ ನಂ.91 ಮತ್ತು 91 ಬಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ಅವುಗಳನ್ನು ದಾವೆಯಲ್ಲಿ ಸೇರಿಸಿದ್ದರೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಸೇರಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ, ಅದನ್ನು ಪ್ರತಿವಾದಿಗಳಿಗೆ ಮರಣ ಶಾಸನ ಮಾಡಿರುವುದರಿಂದ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ಈ ದಾವೆ ಕಾನೂನಿನಡಿಯಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಿಲ್ ಪ್ರಕರವಾಗಿ ದಾವಾ ಆಸ್ತಿಯ ಸ್ವಾಧೀನವನ್ನು ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ.**

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು